ರಮೇಶ್ ಕುಮಾರ್‌ರವರು, ಖರ್ಗೆಯವರು ಏನು ಹೇಳಿದರು ಎಂದರೆ, ಕೊನೆಯ ಪಕ್ಷ ಕುಡಿಯುವ ನೀರಿಗಾಗಿ 100 ಕೋಟಿಯಾದರೂ ಕೊಡಿ ಎಂದು ಹೇಳಿದೆವು. 50 ಕೋಟಿ ಮೇವಿಗೆ ಇಡಿ. 200 ಕೋಟಿ ಏಕೆಂದರೆ, employment generation, ಕೂಲಿ ಕೆಲಸ ಕೊಡತಕ್ಕಂಥಾದ್ದಕ್ಕೆ, ಮಾನ್ಯ ಡಿ.ಆರ್. ಪಾಟೀಲ್‌ರವರು ಹೇಳಿದ ಹಾಗೆ ಪ್ರಾರಂಭಿಸಬೇಕು. ಸುಮ್ಮನೆ ಇವರು 60 ಕೋಟಿ 65 ಕೋಟಿ ಎಂದು ಹೇಳುತ್ತಿದ್ದಾರೆ. ನಾವು ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದರೂ ಕೂಡ ಈ ಸರ್ಕಾರಕ್ಕೆ ರಾಜ್ಯದಲ್ಲಿರತಕ್ಕಂಥ ಗಂಭೀರವಾದಂಥ ಬರಗಾಲದ ಬಗ್ಗೆ ಇನ್ನೂ ಅವರ ಗಮನಕ್ಕೆ ಬಂದಿಲ್ಲ.

ಈ ಮೊದಲು ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದನ್ನೇ ಹೇಳುತ್ತಿದ್ದಾರೆ. ಯಾವ ಜಿಲ್ಲಾಧಿಕಾರಿಯ ಬಳಿಯೂ ಹಣವಿಲ್ಲ. 136 ಕೋಟಿ ರೂಪಾಯಿ ಖಚಾಗದೇ ಹಾಗೆಯೇ ಉಳಿದಿದೆ. ಕೇಂದ್ರ ಸರ್ಕಾರದಿಂದ ಬೇರೆ ಬೇರೆ ಬಾಬ್ತುಗಳಿಗೆ ಬಂದಂಥ ಹಣವನ್ನು ಬಿಡುಗಡೆ ಮಾಡಬೇಕು. ಆದರೆ ಇವರು ಮಾಡುತ್ತಿಲ್ಲ. ಜನರ ನೆರವಿಗೆ ಬರುವುದಕ್ಕೆ ಅವರಿಗೆ ಮನಸ್ಸು ಇಲ್ಲ. ಅದಕ್ಕೆ ನಾವು ಬರಗಾಲದ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ತಾವು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ ತಮಗೆ ಧನ್ಯವಾದಗಳು. ಆದರೆ ಸರ್ಕಾರ ಇದರ ಬಗ್ಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಅದಕ್ಕೆ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :– ಆಯಿತು ಗಲಾಟೆ ಮಾಡದೇ ಸಮಾಧಾನದಿಂದ ಹೋಗಿಬಿಡಿ.

ಶ್ರೀ ಜಗದೀಶ್ ಶೆಟ್ಟರ್ :– ಕುಡಿಯುವ ನೀರಿಗಾಗಿ ಹಣ ಕೊಡುತ್ತೇವೆಂದರೂ ನೀವು ಕೇಳುತ್ತಿಲ್ಲ. ಬರಗಾಲದ ಸಲುವಾಗಿ ಎರಡೆರಡು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ ಆದರೂ ನಿಮಗೆ ಸಮಾಧಾನ ಇಲ್ಲ.

ಅಧ್ಯಕ್ಷರು :– ಬೇಕಾದಷ್ಟು ಹಣ ಬಿಡುಗಡೆ ಮಾಡಿದ್ದೇವೆಂದು ಅವರು ಹೇಳುತ್ತಾರೆ. ನೀವು ಏನೂ ಬಿಡುಗಡೆ ಮಾಡಿಲ್ಲವೆಂದು ಹೇಳುತ್ತೀರಿ.

ಶ್ರೀ ಜಗದೀಶ್ ಶೆಟ್ಟರ್ :– ಇದರಲ್ಲಿ ರಾಜಕೀಯ ಮಾಡುವುದಕ್ಕೆ ಹೋಗಬಾರದು.